# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 68/2024

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮಹದೇವಪ್ರಸಾದ್ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಶಿವಲಿಂಗಸ್ವಾಮಿ | | **27.02.2025** |
| **ವಯಸ್ಸು** | ಃ **29** ವರ್ಷ | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** | ಃ **15** |
| **ವಾಸಸ್ಥಳ** | ಃ ಮರಹಳ್ಳಿಪುರ | **ಚಾ.ಸಾ.** | ಃ **21** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಪರಶಿವಪ್ಪ ನನಗೆ ತಾತನಾಗಬೇಕು. ಕೋರ್ಟ್ ಮುಂದೆ ಇರುವ *1* ನೇ ಆರೋಪಿತ ಆದೀಶ ನನಗೆ ಚಿಕ್ಕಪ್ಪನಾಗಬೇಕು. ಪ್ರಭುಸ್ವಾಮಿ ನನಗೆ ತಾತನಾಗಬೇಕು. ಪರಶಿವಪ್ಪನ ಜಮೀನು ಆರೋಪಿತರ ಜಮೀನು ಅಕ್ಕಪಕ್ಕದಲ್ಲಿವೆ. ಪರಶಿವಪ್ಪ ಇವರು ಅವರ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರಲಿಲ್ಲ. ಆ ಜಮೀನಿನಲ್ಲಿ ಆರೋಪಿತರು ಮತ್ತು ಇತರರು ದನ ಮೇಯಿಸುತ್ತಿದ್ದರು ಮತ್ತು ಓಡಾಡುತ್ತಿದ್ದರು. ಆರೋಪಿತರು ಪರಶಿವಪ್ಪ ಇವರ ಜಮೀನಿನ ಮೂಲಕವೇ ತಮ್ಮ ಜಮೀನಿಗೆ ಹೊಗುತ್ತಿದ್ದರು. ದಿಃ*30.11.2023* ರಂದು ಪರಶಿವಪ್ಪ ಮರಣಹೊಂದಿದ್ದಾರೆ. ದಿಃ*29.11.2023* ರಂದು ಸಂಜೆ ***5.45*** ಕ್ಕೆ ಮರಹಳ್ಳಿ ಗ್ರಾಮದ ಸಿದ್ದೇಶ ಎನ್ನುವವರು ನನಗೆ ಫೋನ್ ಮಾಡಿ ನಿನ್ನ ಚಿಕ್ಕಪ್ಪನಿಗೂ ನಿನ್ನ ತಾತ ಪರಶಿವಪ್ಪನಿಗೂ ಗಲಾಟೆ ಆಗಿದೆ ಎಂದು ಹೇಳಿದ್ದ. ಆ ಕಾಲಕ್ಕೆ ನಾನು ಪರಶಿವಪ್ಪನ ಜಮೀನಿನ ಬಳಿ ಹೋಗಿ

ನೋಡಿದಾಗ ನನ್ನ ತಾತ ಪರಶಿವಪ್ಪನಿಗೆ ಕೈ ಕಾಲುಗಳಿಗೆ ಗಾಯಗಳಾಗಿದ್ದವು. ಆ ಕಾಲಕ್ಕೆ ನೆಲದ ಮೇಲೆ ಮತ್ತು ಅವರ ಬಟ್ಟೆಗಳಿಗೆ ರಕ್ತ ಹತ್ತಿತ್ತು. ನಾನು ಹೋದಾಗ ಮಹದೇವಸ್ವಾಮಿ, ಮಹೇಶ, ನನ್ನ ಅಜ್ಜಿ ಮಹದೇವಮ್ಮ ಮುಂತಾದವರು ಹಾಜರಿದ್ದರು. ಆ ಕಾಲಕ್ಕೆ ಆರೋಪಿತರು ಆ ಸ್ಥಳದಲ್ಲಿ ಇರಲಿಲ್ಲ. ಆ ಕಾಲಕ್ಕೆ ನನ್ನ ಅಜ್ಜಿ ಮಹದೇವಮ್ಮ ಈ ಪ್ರಕರಣದ *1* ನೇ ಆರೋಪಿ ಆದೀಶ ಮಚ್ಚಿನಿಂದ ನನ್ನ ತಾತ ಪರಶಿವಪ್ಪನಿಗೆ ಹೊಡೆದ ಬಗ್ಗೆ ಹೇಳಿದ್ದರು. ಆ ಪರಶಿವಪ್ಪ ಇವರು ಸಹ ತನಗೆ ಆದೀಶ ಮಚ್ಚಿನಿಂದ ಹೊಡೆದಿದ್ದಾಗಿ ಹೇಳಿದ್ದರು. ಆ ಕಾಲಕ್ಕೆ ನಾನು ನನ್ನ ಚಿಕ್ಕಪ್ಪ ಮಹದೇವಸ್ವಾಮಿ ಅವರಿಗೆ ಫೋನ್ ಮಾಡಿ ಅವರ ಓಮ್ನಿ ಕಾರ್ ತರಿಸಿ ಪರಶಿವಪ್ಪ ಇವರನ್ನು ಮೈಸೂರಿನ ಮಿಷಿನ್ ಆಸ್ಪತ್ರೆಗೆ ಸೇರಿಸಿದ್ದೇವು. ಮರುದಿನ ಬೆಳಗಿನ ಜಾವ ಪರಶಿವಪ್ಪ ಮರಣಹೊಂದಿದ್ದರು. ಪೊಲೀಸರ ಮುಂದೆ ಸಹ ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು</u>

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***